ರಾಯಚೂರು
ಕೊಪ್ಪಳ
ಯಾದಗಿರಿ
ಕಲಬುರಗಿ
ಬೀದರ್
ಬಳ್ಳಾರಿ
ಬೆಂಗಳೂರು
ಒಂದೇ
ಆವೃತ್ತಿಯಲ್ಲಿ ಪ್ರಕಟ

# ಈಶಾನ್ಯ ಟೈಮ್ಸ್

ESHANYA TIMES REGIONAL KANNADA DAILY

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕ: ನಾಗತೀಹಳ್ಳಿ ನಾಗರಾಜ್ Vol:12 Issue:222 ಸಂಪುಟ:12 ಸಂಚಿಕೆ:222 ಗುರುವಾರ 14-09-2017 ರಾಯಚೂರು PRN: Raichur/30/2016-18 ಪುಟ-6 ₹ 1.50

**ಪ್ರಯಾಣಿಕರ ಗುರುತಿನ ಚೀಟಿಯಾಗಿ ಮೊಬೈಲ್ ಆಧಾರ್ ಪರಿಗಣನೆ: ರೈಲ್ವೇ ಇಲಾಖೆ**

-4 ನೇ ಪುಟಕ್ಕೆ

## ಸಂಕ್ಷಿಪ್ತ ಸುದ್ದಿ

### ಬಸ್ ನಿಲ್ಲಿಸದಿದ್ದಕ್ಕೆ ವಿದ್ಯಾರ್ಥಿಗಳ ಪ್ರತಿಭಟನೆ: ಬಸ್ ಹಿಂಬದಿ ಗಾಜು ಪುಡಿ ಪುಡಿ

ರಾಯಚೂರು:

ಬಸ್ ನಿಲ್ಲಿಸುವಂತೆ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಕಲ್ಲು ತೂರಿದ್ದರಿಂದ ಬಸ್ನ ಹಿಂಬದಿ ಗಾಜು ಜಖಂಗೊಂಡಿರುವ ಘಟನೆ ಸಿಂಧನೂರು ತಾಲೂಕಿನ ಹೊಸಳ್ಳಿಕ್ಯಾಂಪ್ನಲ್ಲಿ ನಡೆದಿದೆ.

ಗಾಂಧಿನಗರದಿಂದ ಸಿಂಧನೂರಿಗೆ ಬರುತ್ತಿದ್ದ ಬಸ್ ಗ್ರಾಮದಲ್ಲಿ ನಿಲುಗಡೆ ಮಾಡುತ್ತಿರಲಿಲ್ಲ. ಇದರಿಂದ ಆಕ್ರೋಶಗೊಂಡಿರುವ ವಿದ್ಯಾರ್ಥಿಗಳು ಬಸ್ ಅಡ್ಡಗಟ್ಟಿ ನಿಲ್ಲಿಸಿ ವಾಗ್ವಾದಕ್ಕಿಳಿದಿದ್ದರು. ಈ ಸಂದರ್ಭದಲ್ಲಿ ಕಿಡಿಗೇಡಿಯೋರ್ವ ಕಲ್ಲು ತೂರಿದ್ದರಿಂದ ಬಸ್ನ ಹಿಂಬದಿ ಗಾಜು ಪುಡಿ ಪುಡಿಯಾಗಿದೆ.

ಬಳಿಕ ವಿದ್ಯಾರ್ಥಿಗಳು ಮತ್ತು ಬಸ್ ಚಾಲಕನ ನಡುವೆ ಪರಿಸ್ಥಿತಿ ಕೈ ಕೈ ಮಿಲಾಯಿಸುವ ಹಂತಕ್ಕೆ ತಿರುಗಿತ್ತು. ಸಿಂಧನೂರು ಗ್ರಾಮೀಣ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

### ವೀರಶೈವ-ಲಿಂಗಾಯತರ ಮಧ್ಯೆ ಬೆಂಕಿ ಹಚ್ಚಿದ್ದೇ ಸಿಎಂ- ಕೆ.ಎಸ್ ಈಶ್ವರಪ್ಪ

ಕಲಬುರಗಿ:

ವೀರಶೈವ-ಲಿಂಗಾಯತ ಧರ್ಮೀಯರಮಧ್ಯೆ ಬೆಂಕಿ ಹಚ್ಚುವ ಕೆಲಸವನ್ನು ಸಿಎಂ ಸಿದ್ದರಾಮಯ್ಯ ಮಾಡಿದ್ದಾರೆ. ಇಲ್ಲಿ ಸಚಿವ ಎಂ.ಬಿ ಪಾಟೀಲರನ್ನು ಹರಿಕೆಯ ಕುರಿ ಮಾಡಲಾಗಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷನಾಯಕ ಕೆ.ಎಸ್ ಈಶ್ವರಪ್ಪ ಹೇಳಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಧರ್ಮಗಳಮಧ್ಯೆ ಜಗಳಹಚ್ಚುವ ಮೂಲಕಯಡಿಯೂರಪ್ಪರನ್ನು ಸಿಎಂ ಆಗೋದನ್ನು ತಪ್ಪಿಸಲು ಸಿದ್ದರಾಮಯ್ಯ ಹುನ್ನಾರಮಾಡುತ್ತಿದ್ದಾರೆಎಂದು ಸಿಎಂ ವಿರುದ್ಧಈಶ್ವರಪ್ಪವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಆಡಳಿತ ನಡೆಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಆದರೂ, ಸಿದ್ದರಾಮಯ್ಯ ಮತ್ತೆ ಸಿಎಂ ಆಗುವ ಕನಸು ಕಾಣುತ್ತಿದ್ದಾರೆ. ಇದು ಈ ಜನ್ಮದಲ್ಲಿ ಸಾಧ್ಯವಿಲ್ಲ ಎಂದು ಭವಿಷ್ಯ ನುಡಿದರು. ತೊಗರಿ ಖರೀದಿ ಕೇಂದ್ರ ಆರಂಭಿಸಲಿ ಕಷ್ಟದಲ್ಲಿರುವ ರೈತರ ಸಹಾಯಕ್ಕಾಗಿ ತೊಗರಿ ಖರೀದಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ರಾಜ್ಯ ಸರ್ಕಾರ ತಕ್ಷಣ ಖರೀದಿ ಕೇಂದ್ರ ಆರಂಭಿಸಲಿ ಎಂದು ಈಶ್ವರಪ್ಪ ಆಗ್ರಹಿಸಿದರು.

# ರಾಜ್ಯದ 25 ಜಿಲ್ಲೆಗಳಲ್ಲಿ ವರ್ತುಲ ರಸ್ತೆ ನಿರ್ಮಾಣಕ್ಕೆ ಸಂಪುಟ ಅಸ್ತು

ಬೆಂಗಳೂರು:

ರಾಜ್ಯದ 25 ಜಿಲ್ಲಾ ಕೇಂದ್ರಗಳಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ದೃಷ್ಟಿಯಿಂದ ವರ್ತುಲ ರಸ್ತೆಗಳನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ಇಂದು ನಡೆದ ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಟಿ.ಬಿ.ಜಯಚಂದ್ರ, ಇದೇ ಕಾರಣಕ್ಕಾಗಿ ಸಮೀಕ್ಷಾ ವರದಿ ನೀಡಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಮಿತಿಯಲ್ಲಿ ಹಣಕಾಸು ಇಲಾಖೆ, ನಗರಾಭಿವೃದ್ಧಿ ಇಲಾಖೆ, ಲೋಕೋಪಯೋಗಿ ಇಲಾಖೆ, ಪೌರಾಡಳಿತ ಇಲಾಖೆಯ ಉನ್ನತಾಧಿಕಾರಿಗಳು ಸೇರಿದಂತೆ ಹಲ ಹಂತದ ಅಧಿಕಾರಿಗಳು ಇರುತ್ತಾರೆ. ಈ ಸಮಿತಿ ರಾಜ್ಯದ ಇಪ್ಪತ್ತೈದು ಜಿಲ್ಲಾ ಕೇಂದ್ರಗಳಲ್ಲಿ ವರ್ತುಲ ರಸ್ತೆಗಳನ್ನು ನಿರ್ಮಿಸುವ ಕುರಿತು ಎಲ್ಲ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲಿದೆ. ಯಾವ ರೀತಿ ಯೋಜನೆಯನ್ನು ಅನುಷ್ಠಾನಗೊಳಿಸಬಹುದು ಎಂಬ ಕುರಿತು ವಿವರವಾದ ಸಮೀಕ್ಷಾ ವರದಿ ನೀಡಲಿದೆ ಎಂದು ಹೇಳಿದರು.



**ಚಾಮರಾಜನಗರ, ಕೊಪ್ಪಳ ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಶಾಲಾ ಮಕ್ಕಳಿಗೆ ನೀಡುವ ಬಿಸಿಯೂಟ ಯೋಜನೆಯಡಿ ಸಾವಯವ ಅಕ್ಕಿಯನ್ನು ಬಳಕೆ ಮಾಡಲು ಅನುಮತಿ**

ಮುಂದಿನ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ಅತ್ಯಧಿಕವಾಗಲಿದೆ. ಹೀಗಾಗಿ ಮುಂಚಿತವಾಗಿಯೇ ಈ ಕುರಿತು ಚಿಂತನೆ ನಡೆಸಿ ವರ್ತುಲ ರಸ್ತೆಗಳನ್ನು ನಿರ್ಮಿಸಲು ಸಜ್ಜಾದರೆ ಅನುಕೂಲವಾಗುತ್ತದೆ ಎಂದು ವಿವರಿಸಿದರು.

ಸದರಿ ಸಮಿತಿಗೆ 275 ಕೋಟಿ ರೂ.ಗಳನ್ನು ಒದಗಿಸಲು ಇಂದು ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದ್ದು, ಮುಂದಿನ ಐದು ವರ್ಷಗಳಲ್ಲಿ ಸಮಗ್ರ ವರದಿ ನೀಡಲಿದೆ. ಅದರ ಆಧಾರದ ಮೇಲೆ ವರ್ತುಲ ರಸ್ತೆಗಳ ನಿರ್ಮಾಣ ಕಾರ್ಯ ಆರಂಭವಾಗಲಿದೆ ಎಂದರು.

ಹೊಸ ನೀತಿ: ರಾಜ್ಯದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಿ, ಪೆಟ್ರೋಲ್, ಡೀಸೆಲ್ ಮೇಲಿನ ಅವಲಂಬನೆಯನ್ನು ತಗ್ಗಿಸುವ ಸಲುವಾಗಿ ಕಾರು, ದ್ವಿಚಕ್ರ ವಾಹನಗಳು ಸೇರಿದಂತೆ ಎಲ್ಲ ಹಂತದ ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಉತ್ತೇಜನ ನೀಡುವ ಸಲುವಾಗಿ ಹೊಸ ನೀತಿಯೊಂದನ್ನು ರೂಪಿಸಲಾಗಿದೆ. ಈ ನೀತಿಯ ಕುರಿತು ಇಂದು ನಡೆದ ಸಚಿವ ಸಂಪುಟ ಸಭೆ ಸುದೀರ್ಘ ಚರ್ಚೆ ನಡೆಸಿದ್ದು, ಅದಕ್ಕೆ ಒಪ್ಪಿಗೆ ನೀಡಲಾಗಿದೆ ಎಂದರು.

ಸಂಚಾರ ದಟ್ಟಣೆ ತಗ್ಗಿಸಲು ಕ್ರಮ: ಇನ್ನು ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆಯನ್ನು ತಗ್ಗಿಸುವ ಸಲುವಾಗಿ 2095 ಕೋಟಿ ರೂ.ಗಳ ವೆಚ್ಚದಲ್ಲಿ 155 ಕಿ.ಮೀ ಉದ್ದದ ನಾಲ್ಕು ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹೊಸಕೋಟೆ-ದೇವನಹಳ್ಳಿ, ನೆಲಮಂಗಲ-ಬ್ಯಾತ, ಆನೇಕಲ್-ಹೊಸಕೋಟೆ, ಹಾರೋಹಳ್ಳಿ-ಆನೇಕಲ್ ಮಾರ್ಗದ ರಸ್ತೆಗಳನ್ನು ದ್ವಿಪಥ ರಸ್ತೆಗಳನ್ನಾಗಿ ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಮೂಲಕ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಏರ್ಪೋರ್ಟ್ ಸೇರಿದಂತೆ ನಾಲ್ಕು ಪ್ರಮುಖ ರಸ್ತೆ ಜಾಲವನ್ನು ಅಭಿವೃದ್ಧಿಪಡಿಸಲಾಗುತ್ತದೆ ಎಂದು ನುಡಿದರು.

ರಾಜ್ಯದ ಎಲ್ಲ ಮಹಾನಗರ ಪಾಲಿಕೆಗಳಲ್ಲಿರುವ ವಿವಿಧ ಅಧಿನಿಯಮಗಳನ್ನು ಕ್ರೋಢೀಕರಿಸಿ ಏಕರೂಪದ ನಿಯಮಗಳನ್ನು ಜಾರಿಗೆ ತರಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ. ಅರಣ್ಯ ಇಲಾಖೆಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಕ್ರೀಡಾಪಟುಗಳಿಗೆ ನೇರ ನೇಮಕಾತಿ ನೀಡಬೇಕು ಎಂಬ ಕಾರಣಕ್ಕಾಗಿ ಈ ಹಿಂದೆ 125 ಹುದ್ದೆಗಳನ್ನು ಸೃಷ್ಟಿಸಲಾಗಿತ್ತಾದರೂ, ಆ ಪೈಕಿ 54 ಹುದ್ದೆಗಳು ಖಾಲಿ ಇರುವುದರಿಂದ ಆ ಹುದ್ದೆಗಳನ್ನು ಭರ್ತಿ ಮಾಡಲು ಇನ್ನೊಮ್ಮೆ ಅವಕಾಶ ನೀಡಲು ಸಚಿವ ಸಂಪುಟ ತೀರ್ಮಾನಿಸಿದೆ ಎಂದರು.

ಧಾರವಾಡದ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ಕಟ್ಟಡಕ್ಕೆ ನೂರು ವರ್ಷವಾಗಿದ್ದು, ಅದರ ದುರಸ್ತಿ ಮತ್ತಿತರ ಕಾರ್ಯಗಳಿಗಾಗಿ ಇಪ್ಪತ್ತೈದು ಕೋಟಿ ರೂ. ನೀಡಲು ಸರ್ಕಾರ ನಿರ್ಧರಿಸಿದೆ. ಗದಗನಲ್ಲಿರುವ

-4ನೇ ಪುಟಕ್ಕೆ

# ಯಡಿಯೂರಪ್ಪ ಭ್ರಷ್ಟಾಚಾರ ಗಿನ್ನಿಸ್ ದಾಖಲೆ: ಬಹಿರಂಗ ಚರ್ಚೆಗೆ ಸಿದ್ಧ- ಸಿದ್ದರಾಮಯ್ಯ

ಬೆಂಗಳೂರು:

ಬಿ.ಎಸ್.ಯಡಿಯೂರಪ್ಪ ಅವರು ನಡೆಸಿದ ಭ್ರಷ್ಟಾಚಾರವೇ ಗಿನ್ನಿಸ್ ದಾಖಲೆ ಸೇರುವ ಮಟ್ಟದಲ್ಲಿರುವಾಗ ಬಿಜೆಪಿಯವರು ಭ್ರಷ್ಟಾಚಾರದ ಬಗ್ಗೆ ಬಹಿರಂಗ ಚರ್ಚೆಗೆ ಆಹ್ವಾನ ನೀಡುತ್ತಿದ್ದಾರೆ ಎಂದಿರುವ ಸಿಎಂ ಸಿದ್ದರಾಮಯ್ಯ, ಬಿಜೆಪಿಯ ಆಹ್ವಾನ ಸ್ವೀಕರಿಸಿದ್ದೇನೆ. ಬೇಕಿದ್ದರೆ ಬಹಿರಂಗ ಚರ್ಚೆಗೆ ಬರಲಿ ಸವಾಲು ಎಸೆದಿದ್ದಾರೆ.



ವಿಧಾನಸೌಧದ ಮುಂಭಾಗದಲ್ಲಿ ಸಾರಿಗೆ ಇಲಾಖೆಯ ಕ್ಲಬ್ ಕ್ಲಾಸ್ ಬಸ್ಸುಗಳಿಗೆ ಹಸಿರು ನಿಶಾನೆ ತೋರಿಸಿದ ನಂತರ ಸುದ್ದಿಗಾರರ ಜತೆ ಸಿಎಂ ಮಾತನಾಡಿದರು. ಬಿಜೆಪಿಯವರು ನಮ್ಮ ಸರ್ಕಾರದ ಬಗ್ಗೆ, ಸಚಿವರ ಭ್ರಷ್ಟಾಚಾರದ ಬಗ್ಗೆ ಬಹಿರಂಗ ಚರ್ಚೆಗೆ ತಯಾರಿದ್ದಾರಂತೆ. ಅವರು ತಯಾರಿದ್ದರೆ ನಾವೂ ತಯಾರಿದ್ದೇವೆ. ಬಹಿರಂಗ ಚರ್ಚೆಗೆ ಬರಲಿ. ಇರುವ ದಾಖಲೆಗಳನ್ನೆಲ್ಲ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದರು.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ನಡೆಸಿದ ಭ್ರಷ್ಟಾಚಾರವೇ ಗಿನ್ನಿಸ್ ದಾಖಲೆಗೆ ಸೇರುವಷ್ಟಿದೆ. ಹೀಗಿರುವಾಗ ಇವರು ಕಾಂಗ್ರೆಸ್ನ ಭ್ರಷ್ಟಾಚಾರದ ಕುರಿತು ಮಾತನಾಡುತ್ತಾರಂತೆ ಎಂದು ಟೀಕೆ ಮಾಡಿದರು.

ಬರೀ ದಾಖಲೆಗಳನ್ನು ಬಿಡುಗಡೆ

-4ನೇ ಪುಟಕ್ಕೆ

# ಮಕ್ಕಳ ಹಕ್ಕುಗಳ ಕುರಿತು ಅರಿವು: ದಕ್ಷಿಣ ಭಾರತದ ಶಾಸಕರಿಗೆ ಇಂದು ಸಮಾವೇಶ

ಬೆಂಗಳೂರು:

ಜನಪ್ರತಿನಿಧಿಗಳಲ್ಲಿ ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸುವ ನಿಟ್ಟಿನಲ್ಲಿ ದಕ್ಷಿಣ ಭಾರತದ ವಿವಿಧ ರಾಜ್ಯಗಳ ಶಾಸಕರುಗಳಿಗೆ ವಿಕಾಸಸೌಧದಲ್ಲಿ ಒಂದು ದಿನದ ಸಮಾವೇಶವನ್ನು ನಾಳೆ (ಸೆ.14) ಹಮ್ಮಿಕೊಳ್ಳಲಾಗುತ್ತಿದೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ವಿಧಾನ ಪರಿಷತ್ ಸಭಾಪತಿ ಡಿ.ಹೆಚ್.ಶಂಕರಮೂರ್ತಿ ಅವರು, ಮಕ್ಕಳ ಹಕ್ಕುಗಳ ಕುರಿತು ಜಾಗತಿಕವಾಗಿ ಅರಿವು ಮೂಡಿಸುವ ಕಾರ್ಯ ಭರದಿಂದ ಸಾಗಿದೆ.

ಜನಪ್ರತಿನಿಧಿಗಳಲ್ಲಿ ಮಕ್ಕಳ ಹಕ್ಕುಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು, ಇದರಲ್ಲಿ ಒಟ್ಟು 8 ರಾಜ್ಯಗಳ ಶಾಸಕರುಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲ ಬಾರಿ ಶಾಸಕರುಗಳಿಗಾಗಿ ಇಂತಹ ಸಮಾವೇಶವನ್ನು ಪ್ರಥಮ ಬಾರಿಗೆ ಹಮ್ಮಿಕೊಂಡಿದ್ದು, ಈ ಸಮಾವೇಶದಲ್ಲಿ ಆಂಧ್ರ, ಗೋವಾ, ಕೇರಳ, ತೆಲಂಗಾಣ, ಪುದುಚೇರಿ, ಮಹಾರಾಷ್ಟ್ರ ಮತ್ತು ತಮಿಳುನಾಡಿನ 50ಕ್ಕೂ ಹೆಚ್ಚು ಶಾಸಕರುಗಳು ಈಗಾಗಲೇ ಈ ಕಾರ್ಯಕ್ರಮದಲ್ಲಿ

-4ನೇ ಪುಟಕ್ಕೆ

# ಕಲಬುರಗಿಯಲ್ಲಿ ಮತ್ತೆ ಕಂಪಿಸಿದ ಭೂಮಿ: ಜನರಲ್ಲಿ ಆತಂಕ



ಕಲಬುರಗಿ:

ಜಿಲ್ಲೆಯಲ್ಲಿ ಮತ್ತೆ ಭೂಕಂಪನದ ಅನುಭವವಾಗಿದೆ. ಮನೆಗಳಿಂದ ಜನರು ಹೊರಗೆ ಓಡಿ ಬಂದು ಆತಂಕಕ್ಕೆ ಒಳಗಾದ ಘಟನೆ ನಡೆದಿದೆ. ಮನೆಗಳು ಬಿರುಕು ಬಿಟ್ಟು ಕೆಲ ಹೊತ್ತು ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಚಿಂಚೋಳಿ ತಾಲೂಕಿನ ಗಡಿಕೇಶ್ವರ ಗ್ರಾಮದಲ್ಲಿ ಲಘು ಭೂಕಂಪನದ ಅನುಭವವಾಗಿದೆ ಎಂದು ಗ್ರಾಮಸ್ಥರು ಹೇಳಿಕೊಂಡಿದ್ದಾರೆ. ಆದರೆ ಭೂಕಂಪನ ಆಗಿರುವ ಬಗ್ಗೆ ಅಧಿಕೃತವಾದ ಮಾಹಿತಿ ಲಭ್ಯವಾಗಿಲ್ಲ.

ಕಲಬುರಗಿ ತಾಲೂಕಿನ ಶರಣಸಿರಸಗಿ ಗ್ರಾಮದಲ್ಲಿರುವ

-4ನೇ ಪುಟಕ್ಕೆ

# ಹಿಂದುಳಿದ- ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ ಕೊರತೆಯಿಲ್ಲ: ಅನುಷ್ಠಾನದ ಕೊರತೆ ನಿವಾರಣೆಗೆ ಕ್ರಮ- ಕೆ.ಆರ್.ಲೋಬೋ



ರಾಯಚೂರು, ಸೆ.13-

ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗೆ ಅನುದಾನ ಕೊರತೆಯಿಲ್ಲ, ಅನುಷ್ಠಾನದ ಕೊರತೆಯಿದೆ. ಸರ್ಕಾರ ಬಿಡುಗಡೆಯಾದ ಅನುದಾನವನ್ನು ಸಮರ್ಪಕ ಬಳಕೆ ಇಲಾಖೆ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಕ್ರಮವಹಿಸಬೇಕಿದೆ ಎಂದು ಸಮಿತಿ ಅಧ್ಯಕ್ಷ ಕೆ.ಆರ್. ಲೋಬೋ ಹೇಳಿದರು.

ಅವರಿಂದು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಅಧಿಕಾರಿಗಳ ಮಟ್ಟದ ಸಭೆ ನಡೆಸಿ ನಂತರ ಭೇಟಿಯಾದ ಮಾಧ್ಯಮಗಳೊಂದಿಗೆ ಮಾತನಾಡಿದರು. ಈಗಾಗಲೇ ಸರ್ಕಾರಕ್ಕೆ ಎರಡು ವರದಿಯನು ಸಮಿತಿ ಸಲ್ಲಿಸಿದೆ. ಇನ್ನುಳಿದ ಜಿಲ್ಲೆಗಳ ಪ್ರವಾಸ ಕೈಗೊಂಡು ಅಗತ್ಯವಿರುವ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ನೀಡಲಾಗುತ್ತದೆ ಎಂದರು.

ಬಿದಾಯಿ ಯೋಜನೆಯಡಿ ಮದುವೆ ಅಲ್ಪಸಂಖ್ಯಾಯತ ವಿವಾಹಿತರಿಗೆ ನೀಡಬೇಕಾಗಿರುವ ಹಣ ವಿಳಂಬವಾಗುತ್ತಿರುವ ನಿಜ. ಸರ್ಕಾರ ನಿಗಧಿಪಡಿಸಿರುವ ಅನುದಾನ ಸಾಲದೇ ಇರುವದು ವಿಳಂಬಕ್ಕೆ ಕಾರಣವಾಗಿದೆ. 150 ಕೋಟಿ ರೂ ಅನುದಾನ ನಿಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವದಾಗಿ ಹೇಳಿದರು.

ಅಲ್ಪಸಂಖ್ಯಾತರ ಸಮೂದಾಯ ಜನರು ವಾಸಿಸುವ ಕಾಲೋನಿ ಅಭಿವೃದ್ದಿ ಯೋಜನೆ ಇದೇ ವರ್ಷದಿಂದ ಪ್ರಾರಂಭಗೊಂಡಿದೆ. ಹೆಚ್ಚು ಜನಸಂಖ್ಯೆ ಹೊಂದಿರುವ

-4ನೇ ಪುಟಕ್ಕೆ

# ಎರಡು ಸಾವಿರ ಮಕ್ಕಳಿಂದ ನದಿ ಉಳಿಸಿ ಅಭಿಯಾನ ಜಾಥಾ



ಗಂಗಾವತಿ:

ಆಧ್ಯಾತ್ಮ ಗುರು ವಾಸುದೇವ ಜಗ್ಗಿ ನೇತೃತ್ವದಲ್ಲಿ ಕೇರಳದ ಈಶಾ ಪೌಂಡೇಶನ್ ಕರೆ ನೀಡುರುವ ನದಿ ಉಳಿಸಿ ಸಾಮಾಜಿಕ ಆಂದೋಲನಕ್ಕೆ ನಗರ ಬೇತೆಲ್ ಆಂಗ್ಲ ಮಾಧ್ಯಮದ ಎರಡು ಸಾವಿರ ಮಕ್ಕಳು ಜಾಗೃತಿ ಜಾಥಾ ನಡೆಸುವ ಮೂಲಕ ಬೆಂಬಲ ಸೂಚಿಸಿದರು.

ಗುಡ್ ಶಪರ್ಡ್ ಶಿಕ್ಷಣ ಸಂಸ್ಥೆಯ ಬೇತೆಲ್ ಆಂಗ್ಲಮಾಧ್ಯಮ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜಿನ ಎರಡು ಸಾವಿರಕ್ಕೂ ಹೆಚ್ಚು ಮಕ್ಕಳು ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ನದಿ ಉಳಿಸುವ ಅಗತ್ಯತೆಯ

-4ನೇ ಪುಟಕ್ಕೆ

# ಸಿರವಾರನಲ್ಲಿ ಬಸ್ ಸಮಸ್ಯೆ ಶಿಕ್ಷಣ ಪಡೆಯಲು ವಿದ್ಯಾರ್ಥಿನಿಯರ ಹರಸಾಹಸ





**ಎಂ.ಪಾಷಾ ಹಟ್ಟಿ**

**ರಾಯಚೂರು:**

ಪ್ರದಾನಿ ನೇಂದ್ರ ಮೋದಿಯವರು ಬೇಟಿ ಬಚಾವೋ ಬೇಟಿ ಪಡವೋ ಎಂಬ ಘೋಷಣೆ ಒಂದು ಕಡೆ ಮೊಳಗಿಸಿದ್ದರೆ ಇನ್ನೊಂದು ಕಡೆ ಮಾನವಿ ತಾಲೂಕಿನ ಸಿರವಾರ ಸುತ್ತಮುತ್ತಲಿನ ಗ್ರಾಮೀಣ ಭಾಗದ ವಿದ್ಯಾರ್ಥಿನಿಯರು ಬಸ್ನ ಸೌಕರ್ಯವಿದಲ್ಲದೇ ಶಿಕ್ಷಣ ಪಡೆಯಲು ದಿನನಿತ್ಯ ಹರಸಾಹಸ ಪಡತ್ತಿರುವುದು ನಡೆದಿದೆ.

ಲಿಂಗಸೂಗೂರ ತಾಲೂಕಿನ ಹಟ್ಟಿ ಯಿಂದ ಸಿರವಾರ ಮಾರ್ಗದ ಸುಮಾರು ಹಳ್ಳಿಗಳ ವಿದ್ಯಾರ್ಥಿನಿಯರು ವಂದ್ಲಿ,ಹೀರಾ,ಕುರಕುಂದಾ ,ನಾರಬಂಡಾ ಕಸನದೊಡ್ಡಿ ಸೇರಿದಂತೆ ವಿವಿಧ

-4ನೇ ಪುಟಕ್ಕೆ



ಸಿರವಾರ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಿಂದ ಸಿರವಾರ ಪಟ್ಟಣಕ್ಕೆ ಶಿಕ್ಷಣ ಪಡೆಯಲು ಪ್ರಯಾಣಿಸುವ ವಿದ್ಯಾರ್ಥಿಗಳಾಗಿ ಪ್ರತೇಕ ಬಸ್ ವವ್ಯಸ್ಥೆ ಮಾಡಲು ಸಂಭಂದಿಸಿದ ಸಾರಿಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಬಸ್ ಅನುಕೂಲ ಕಲ್ಪಿಸಲಾಗುವುದು.

**- ಎನ್.ಎಸ್.ಬೋಸರಾಜು**
**ವಿಧಾನ ಪರಿಷತ ಸದಸ್ಯರು**

ಹಟ್ಟಿ ರಸ್ತೆಯಲ್ಲಿ ವಿವಿಧ ಗ್ರಾಮಗಳಿಂದ ಸುಮಾರು 150 ವಿದ್ಯಾರ್ಥಿಗಳು ಶಿಕ್ಷಣ ಪಡೆಯಲು ಸಿರವಾರ ಪಟ್ಟಣಕ್ಕೆ ದಿನನಿತ್ಯ ಪ್ರಯಾಣಿಸುತ್ತಾರೆ. ಆದರೆ ಹಟ್ಟಿಯಿಂದ ರಾಯಚೂರಿಗೆ ಹೊರಡುವ ಬಸ್ ಒಂದೇ ಈ ರಸ್ತೆಯಲ್ಲಿ ಸಂಚಾರಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದೆ. ತಕ್ಷಣ ಹಟ್ಟಿಯಿಂದ ಸಿರವಾರ ಪಟ್ಟಣಕ್ಕೆ ಹೊಸ ಬಸ್ ವ್ಯವಸ್ಥೆ ಮಾಡಬೇಕೆಂದು ಅವರು ಒತ್ತಾಯಿಸಿದ್ದಾರೆ. ಒಂದು ವೇಳೆ ನಿರ್ಲಕ್ಷ್ಯ ವಹಿಸಿದರೇ ಹೋರಾಟಕ್ಕಿಳಿಯುವುದಾಗಿ ಎಚ್ಚರಿಕೆ ನೀಡಿದ್ದಾರೆ.

**- ಲಿಂಗರಾಜ್ ಕಂದಗಲ್**
**ಎಸ್ಎಫ್ಐ ಜಿಲ್ಲಾ ಜಂಟಿ ಕಾರ್ಯದರ್ಶಿ**

# ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯಿಂದ ಪ್ರಗತಿ ಪರಿಶೀಲನೆ ನಿರ್ದಿಷ್ಟ ಗುರಿ ಮುಟ್ಟಲು ಅಧಿಕಾರಿಗಳು ವಿಶೇಷ ಮತುವರ್ಜಿವಹಿಸಿ- ಕೆ.ಆರ್.ಲೋಬೋ




ರಾಯಚೂರು, ಸೆ.13-

ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಟಾನಗೊಳಿಸದೇ ಇರುವದಕ್ಕೆ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ತೀವ್ರ ಅಸಮಧಾನವ್ಯಕ್ತಪಡಿಸಿತು.

ನಗರದ ಜಿಲ್ಲಾಪಂಚಾಯ್ತಿ ಸಭಾಂಗಣದಲ್ಲಿ ಸಮಿತಿ ಅಧ್ಯಕ್ಷ ಕೆ.ಆರ್ ಲೋಬೊ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿವಿಧ ಇಲಾಖೆಗಳ ಅಭಿವೃದ್ದಿಯನ್ನು ಪರಿಶೀಲಿಸಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 28 ವಿದ್ಯಾರ್ಥಿ ನಿಲಯಗಳಿದ್ದು, 2140 ವಿದ್ಯಾರ್ಥಿಗಳಿದ್ದಾರೆ. 694 ವಿದ್ಯಾರ್ಥಿಗಳು ಎಸ್ಎಸ್ಎಲ್ಸಿ ಪರೀಕ್ಷೆ ಬರೆದಿದ್ದು. 561 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಎಂದು ಇಲಾಖೆ ಅಧಿಕಾರಿ ಮಾಹಿತಿ ನೀಡಿದರು. ವಿದ್ಯಾರ್ಥಿಗಳ ಫಲಿತಾಂಶ ಹೆಚ್ಚಳಕ್ಕೆ ಯಾವುದೇ ಸಮರ್ಪಕ ಕ್ರಮ

-4ನೇ ಪುಟಕ್ಕೆ

| ಚಿನ್ನ : 24 ಕ್ಯಾರೆಟ್ : | 29865 (10 ಗ್ರಾಂ) | ಚಿನ್ನ : 22 ಕ್ಯಾರೆಟ್: | 27359 (10 ಗ್ರಾಂ) | ಬೆಳ್ಳಿ : | 41012 (1 ಕೆಜಿ) | ಡಾಲರ್: | 64.16 ಪ್ರತಿ ಡಾಲರ್ |
|---|---|---|---|---|---|---|---|